**ದಿನಾಂಕಃ 08-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಪಿ.ಎನ್.ಎ., ಆರೋಪಿ ಪರ ವಕೀಲರಿಂದಃ**

ದೂರಿನಲ್ಲಿ ಬರೆದಿರುವ ವಿಚಾರ, ನೋಟಿಸ್‌ನಲ್ಲಿ ಬರೆದ ವಿಚಾರ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಯಾರು ಹೇಳಿರುತ್ತಾರೆ ಅಂದರೆ ನಾನೇ ಬರೆಸಿರುತ್ತೇನೆ. ಅದರೊಳಗೆ ಬರೆದಿರುವ ವಿಷಯಗಳ ಬಗ್ಗೆ ಮಾಹಿತಿ ಇರುತ್ತದೆ. ಮುಖ್ಯ ವಿಚಾರಣೆ ಮತ್ತು ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸರ್ವೆ ನಂಬರ 304 ಎ/1 ಎ/1 ಎ ಪ್ಲಾಟ ನಂಬರ 117 ಇದನ್ನು ಖರೀದಿಸಲು ಹಣ ನೀಡಿರುತ್ತೇನೆ ಅಂತಾ ಬರೆಸಿರುತ್ತೇನೆ ಅಂದರೆ ಸರಿ. ಮೆಹರುನ್ನಿಸಾ ಕಡೆಯಿಂದ ಭದ್ರತೆಗಾಗಿ ಚೆಕ್ ಪಡೆಯಲು ನಿಮಗೆ ತೊಂದರೆ ಇತ್ತಾ ಅಂದರೆ, ಮೆಹರುನ್ನಿಸಾ ಇವರು ಆರೋಪಿಯ ಅತ್ತೆ ಇದ್ದು, ಆರೋಪಿ ಅತ್ತೆಯ ಹೆಸರಿನಲ್ಲಿ ಆಸ್ತಿ ಖರೀದಿ ಮಾಡಿರುತ್ತಾರೆ. ಮೆಹರುನ್ನಿಸಾ ಅವರ ಹೆಸರಿನಲ್ಲಿ ಆಸ್ತಿ ಖರೀದಿ ಹಿಡಿಯಲು ಹಣ ಕೇಳಲು ಬಂದಿದ್ದು, ಆಕೆಯ ಕಡೆಯಿಂದ ಭದ್ರತೆಗಾಗಿ ಚೆಕ್ ಕೊಡಿಸು ಅಂತಾ ಕೇಳಲು ಏನಾದರೂ ತೊಂದರೆ ಇತ್ತಾ ಅಂದರೆ ನಾನು ಅವರಿಂದ ಚೆಕ್ ಪಡೆದಿರುವುದಿಲ್ಲ ಅಂತಾ ಹೇಳುತ್ತಾರೆ. ಹಣ ನೀಡುವ ಸಂಪೂರ್ಣ ಜವಾಬ್ದಾರಿ ಆರೋಪಿಯದೇ ಇತ್ತು. ಮೈರುನ್ನಿಸಾ ಇವರ ಮೇಲೆ ಕ್ರಮ ತೆಗೆದುಕೂಂಡಿರುತ್ತೀರಾ ಅಂದರೆ ಅವರಿಗೂ ನಮಗೂ ಸಂಬಂಧ ಇರುವುದಿಲ್ಲ ಅಂತಾ ನುಡಿಯುತ್ತಾರೆ. ನಾನು 6-7 ವರ್ಷಗಳಿಂದ ಆದಾಯ ತೆರಿಗೆ ಪಾವತಿದಾರನಾಗಿದ್ದು ಆ ದಾಖಲೆಯನ್ನು ಹಾಜರಪಡಿಸಿದ್ದೀರಾ ಅಂದರೆ ನಾನು ನಮ್ಮ ವಕೀಲರ ಬಳಿ ಹಾಜರಪಡಿಸಿರುತ್ತೇನೆ. ನನ್ನ ಮಕ್ಕಳು ತೆರಿಗೆ ಪಾವತಿ ಮಾಡಿದ ಬಗ್ಗೆ ದಾಖಲೆಯನ್ನು ಹಾಜರಪಡಿಸಿದ್ದೀರಾ ಅಂದರೆ ಸದರಿ ದಾಖಲೆಯನ್ನು ನಮ್ಮ ವಕೀಲರ ಬಳಿ ಹಾಜರಪಡಿಸಿರುತ್ತೇನೆ.

ಆರೋಪಿ ಎಷ್ಟು ವರ್ಷದ ಹಿಂದೆ ಚೆಕ್ ಕೊಟ್ಟಿರುತ್ತಾನೆ ಅಂದರೆ 06 ವರ್ಷದ ಹಿಂದೆ ಕೊಟ್ಟಿರುತ್ತಾರೆ. 06 ವರ್ಷದ ಹಿಂದೆ ಆರೋಪಿ ಚೆಕ್ ಕೊಟ್ಟಿರುತ್ತಾನೆ ಅಂತಾ ಹೇಳಿದ್ದು, ನೀವು ಬ್ಯಾಂಕ್‌ಗೆ ಕಲೆಕ್ಷನಗೆ ಯಾವಾಗ ಹಾಕಿದ್ದೀರಾ ಅಂದರೆ, ಯಾವ

ಪಿಡಬ್ಲ್ಯೂ-1

ದಿನಾಂಕ ಅಂತಾ ನೆನಪಿಲ್ಲ. ಆರೋಪಿಗೆ ಯಾವ ದಿನಾಂಕ, ತಿಂಗಳು, ವರ್ಷದಂದು ನೋಟಿಸ್ ಕೊಟ್ಟಿದ್ದೀರಾ ಅಂದರೆ ಚೆಕ್ ನಗಧೀಕರಣಕ್ಕೆ ಹಾಕಿದ ಒಂದು ವಾರದ ನಂತರ ನೋಟಿಸ್ ಕೊಟ್ಟಿರುತ್ತೇನೆ, ಈಗ ತಿಂಗಳು ವರ್ಷ ನೆನಪಿಲ್ಲ ಅಂತಾ ಹೇಳುತ್ತಾರೆ. ಬ್ಯಾಂಕಿನವರು ಯಾವ ತಾರೀಖು, ತಿಂಗಳು ಹಿಂಬರಹ ಕೊಟ್ಟಿರುತ್ತಾರೆ ಅಂದರೆ, 4-5 ದಿನಗಳಲ್ಲಿ ವಾಪಸ್ಸ ಕೊಟ್ಟಿರುತ್ತಾರೆ, ಸಾಕ್ಷಿ ಮುಂದುವರೆದು ಈಗ ತಾರೀಖು, ತಿಂಗಳು ನೆನಪಿಲ್ಲ. ಯಾವ ತಾರೀಖಿನಂದು ಈ ಪ್ರಕರಣ ದಾಖಲೆ ಮಾಡಿರುತ್ತೀರಾ ಅಂದರೆ ಬಹಳ ವರ್ಷವಾಗಿದ್ದರಿಂದ ನೆನಪಿರುವುದಿಲ್ಲ. ನಿಮ್ಮ ನೋಟಿಸ್, ದೂರು, ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ಸುಳ್ಳು ಇರುತ್ತವೆ ಅಂದರೆ ಸರಿಯಲ್ಲ.

ನಿಪಿ-1 ರ ಚೆಕ್‌ನಲ್ಲಿರುವ ಬರವಣಿಗೆ ಮತ್ತು ದಿನಾಂಕ ಬೇರೆ ಇಂಕ್‌ನಲ್ಲಿ ಇದೆ ಅಂದರೆ ಅಷ್ಟಾಗಿ ನನಗೆ ಗೊತ್ತಾಗುವುದಿಲ್ಲ. ನಿಪಿ-1 ರಲ್ಲಿರುವ ಆರೋಪಿತನ ಸಹಿಗೂ ಮತ್ತು ಬರವಣಿಗೆ ಬೇರೆ ಇರುತ್ತದೆ ಅಂದರೆ ನನಗೆ ಗೊತ್ತಾಗುವುದಿಲ್ಲ. ನಿಪಿ-1 ರ ಚೆಕ್‌ನಲ್ಲಿರುವ ಬರವಣಿಗೆಯನ್ನು ನೀವೆ ಮಾಡಿರುತ್ತೀರಿ ಅಂದರೆ ನನಗೆ ಇಂಗ್ಲೀಷ ಬರೆಯಲು ಬರುವುದಿಲ್ಲ. ನಿಪಿ-1 ರಲ್ಲಿರುವ ಬರವಣಿಗೆ ಮತ್ತು ಶಾಹಿಗಳು ಬೇರೆ ಬೇರೆ ಇರುತ್ತವೆ ಅಂದರೆ ಆರೋಪಿಯೇ ಬರೆಸಿಕೊಂಡು ಬಂದಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-08-11-2024

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.